ಸುರುಳಿಯನ್ನೂ ಹಾಕಿ ಕಬ್ಬಿಣದ ಕೊಳವೆಯಿಂದ ಊದಿದ. ನಿಧಾನವಾಗಿ ಬೆಂಕಿ ಎದ್ದು ಸೌದೆಯನ್ನು ಹಿಡಿದುಕೊಂಡಿತು. ತಾಯ ಮೊಲೆಗೆ ಕೈ ಚಾಚುವ ಕೆಂಪು ಮಗು. ಕಾಲನ್ನು ಹಿಡಿಯುವ ಕೆಂಪು ಹಾವು. ನೆಕ್ಕಿ ಉಣ್ಣುವ ನಾಯಿಯ ನಾಲಿಗೆ.

ಬಾ ಮುಖ ಶಿಲೆಯಂತಿತ್ತು. ಬಾಪೂ ಪ್ರಸ್ತುತ ಸ್ಥಿತಿ ಉಳಿದವರಿಗಿಂತ ಬಾ ಅವರಿಗೆ ಹೆಚ್ಚು ಗೊತ್ತಿತ್ತು. ಆದರೆ ಆಶ್ರಮದಲ್ಲಿ ಅವರೊಬ್ಬರು ಮಾತ್ರ ನಿಧಾನವಾಗಿದ್ದರು. ಕೆಲವು ಸಮಯ ತೋಚುವುದುಂಟು, ಬಾ ಮುಖದ ಮೇಲೆ ತುಂಬಿರುವ ಸಮಾಧಾನ, ಪರಿಪೂರ್ಣತೆ ಒಮ್ಮೆಯೂ ಬಾಪುವಿನ ಮುಖದಲ್ಲಿ ಇರಲಿಲ್ಲವೆಂದು. ಏನೇ ಆದರೂ ಬಾಪೂ ಮಕ್ಕಳನ್ನು ಹೊಟ್ಟೆಯಲ್ಲಿ ಹೊರಲಿಲ್ಲ. ರಕ್ತವನ್ನು ಮೊಲೆ ಹಾಲಾಗಿ ಕುಡಿಸಲಿಲ್ಲ.

ಪೂಲ್ಚಂದ್ರರನ್ನು ನೋಡಿದಕೂಡಲೆ ಬಾ ನಿಧಾನವಾದ ದನಿಯಲ್ಲಿ, ''ಬಾಪೂ ಎದ್ದರೇ... ಇಂದು ಯಾವುದೋ ಹೊಸ ಚಿಕಿತ್ಸೆ ಮಾಡಿಕೊಳ್ಳುತ್ತಾರಂತೆ''.

''ಹೌದು'' ಎಂದರು ಪೂಲ್ಚಂದ್ರ.

''ಜೇಡಿ ಮಣ್ಣು, ತಣ್ಣನೆಯ ನೀರು ಇವೆಲ್ಲವನ್ನೂ ಕೇಳಿದರು. ಚಿಮನ್ ಬಾಯ್ ತೆಗೆದುಕೊಂಡು ಹೋದರು. ನೀವೂ ಹೋಗಿ ನೋಡಿ.''

ಜೇಡಿ ಮಣ್ಣೆ, ಏನಿದು ಹೊಸ ವಿಷಯ. ಬೆಂಕಿಯನ್ನು ಬರಿಸುವ ಭೈರಾಗಿ ಜೇಡಿ ಮಣ್ಣನ್ನು ಯಾಕಾಗಿ ಕೇಳುತ್ತಿದ್ದಾರೆ? ಪೂಲ್ಚಂದ್ರ ಬಾಪುವಿನ ಕೋಣೆಗೆ ಹೋದಾಗ ಒಳಗೆ ಚಿಮನ್ ಬಾಯ್ ಒಬ್ಬರೇ ಇದ್ದರು. ಒಂದು ಸಣ್ಣ ಕಲ್ಪತ್ತುವಿನಲ್ಲಿ ಗಂಧದಂತೆ ಏನನ್ನೋ ತೇಯುತ್ತಿದ್ದರು.

''ಏನು?'' ಎಂದು ಸನ್ನೆಮಾಡಿ ಕೇಳಿದರು ಪೂಲ್ಚಂದ್ರ.

''ಜೇಡಿ ಮಣ್ಣು... ಸಬರಮತಿಯಿಂದ ತಂದಿದ್ದೇನೆ.''

ಕೋಣೆಯೊಳಗೆ ಒಂದು ಮರದ ಹಲಗೆಯಲ್ಲಿ ಸೆಣಬಿನ ದಾರದ ಸುರುಳಿಗಳಿದ್ದವು. ತಾಮ್ರದ ಹಂಡೆಯಲ್ಲಿ ತಣ್ಣನೆ ನೀರು. ''ಹರಿವ ನೀರು ಬೇಕೆಂದರು... ನಾನೇ ಸಬರಮತಿಗೆ ಹೋಗಿ ತುಂಬಿ ತಂದೆ.''

''ಭೈರಾಗಿ ಎಲ್ಲಿ?''

''ಯಾವ ಭೈರಾಗಿ.''

ಪೂಲ್ಚಂದ್ರ ಅರ್ಥವಾಗದೆ ಮಾತನಾಡದೆ ನೋಡಿದರು. ಮೆಲ್ಲನೆ ಗೊಣಗುತ್ತ ಬಾಪೂ ಕಣ್ಣುಗಳನ್ನು ತೆರೆದರು. ತುಟಿಗಳು ಅಲುಗಿದವು ''ಪೂಲ್''.

''ಬಾಪೂ.''

''ಆ ಸೆಣಬನ್ನು ನೀರಿನಲ್ಲಿ ಅದ್ದಿ ನನ್ನ ತಲೆಯ ಮೇಲೆ ಸಮನಾಗಿ ಹಾಕು.''

''ಜ್ವರ ಇದೆ...''

''ಜ್ವರಕ್ಕಾಗಿಯೇ...''

ಪೂಲ್ಚಂದ್ರ ಸೆಣಬಿನ ದಾರದ ಎಳೆಗಳನ್ನು ನೀರಿನಲ್ಲಿ ಅದ್ದಿ ಬಾಪುವಿನ ಹಣೆಗೆ ಹಾಕಿದರು. ಬಾಪೂ, ''ಮ್ ಮ್ ಮ್ ಮ್'' ಎಂದು ಗೊಣಗಿದರು. ನಂತರ ಸಣ್ಣ ದನಿಯಲ್ಲಿ, ''ಆ ಜೇಡಿ ಮಣ್ಣಿನ ಲೇಪವನ್ನು ನನ್ನ ಹಣೆಗೂ ಹೊಟ್ಟೆಗೂ ಲೇಪಿಸು...'' ಎಂದರು.

ಪೂಲ್ಚಂದ್ರ ಜೇಡಿಮಣ್ಣನ್ನು ಹಚ್ಚುತ್ತಿರುವಾಗ ಬಾ ಬಂದರು. ಕೈಯಲ್ಲಿನ ಮರದ ಲೋಟದಲ್ಲಿ ಹಣ್ಣಿನ ರಸವಿತ್ತು.

''ಏನದು?'' ಎಂದರು ಬಾಪೂ.

''ಹಣ್ಣಿನ ರಸ ಬೇಕೆಂದರಲ್ಲವೇ.''